<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>S.C.68/2017</u>

ದಿಃ 23.03.2023
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-14 Pw-13

| | | |
|---|---|---|
| ಹೆಸರು | ಃ | ಜಗದೀಶ್ ಟಿ.ವಿ. |
| ತಂದೆಯ ಹೆಸರು | ಃ | ವೆಂಕಟೇಶ್ |
| ವಯಸ್ಸು | ಃ | 25 ವರ್ಷ |
| ಉದ್ಯೋಗ | ಃ | ಕೂಲಿ |
| ವಾಸಸ್ಥಳ | ಃ | ಕಲ್ಯಾಗೇಟ್,ಮಾಗಡಿ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ಹಿಂದೆ ನಾನು ಮಾಗಡಿಯಲ್ಲಿನ ಕಲ್ಯಾಗೇಟ್ ಬಳಿ ಇರುವ ಎಸ್.ಆರ್.ಎಸ್. ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದೆನು.

2. ದಿಃ 01.03.2017ರಂದು ಮಧ್ಯಾಹ್ನ ಸುಮಾರು 2-2.30ರ ಸಮಯದಲ್ಲಿ ಒಬ್ಬ ಮುಸ್ಲಿಂ ಯುವಕ ನಮ್ಮ ಬೇಕರಿಗೆ ಬಂದು 20 ರೂ. ಬೆಲೆಯುಳ್ಳ 2 ಡೈರಿ ಮಿಲ್ಕ ಚಾಕಲೇಟ್ ಗಳನ್ನು ಖರೀದಿಸಿಕೊಂಡು ಹೋಗಿರುತ್ತಾನೆ.

3. ಆತನು ಆಗಾಗ ನಮ್ಮ ಬೇಕರಿಗೆ ಬರುತ್ತಿದ್ದನು.

4. ಆತನ ಹೆಸರು ಗೊತ್ತಿಲ್ಲ.

5. ದಿಃ 03.03.2017ರಂದು ಒಂದು ಮುಸ್ಲಿಂ ಹುಡುಗಿಯ ಕೊಲೆಯಾಗಿ ಅವಳ ದೇಹವನ್ನು ಹೊಸಹಳ್ಳಿ ರಸ್ತೆಯ ಪಕ್ಕದಲ್ಲಿ ಇರುವ

ಹಳ್ಳದಲ್ಲಿ ಗೋಣಿ ಚೀಲದಲ್ಲಿ ಕಟ್ಟಿ ಹಾಕಿರುತ್ತಾರೆ ಎಂದು ತಿಳಿದ ತಕ್ಷಣ ನಾನು ಅಲ್ಲಿ ಹೋಗಿ ನೋಡಿರುತ್ತೇನೆ.

6. ದಿಃ 05.03.2017 ರಂದು ಕೊಲೆ ಮಾಡಿದ ವ್ಯಕ್ತಿಗಳು ಸಿಕ್ಕಿರುತ್ತಾರೆ ಎಂದು ತಿಳಿದ ತಕ್ಷಣ ನಾನು ಪೊಲೀಸ್ ಠಾಣೆಗೆ ಹೋಗಿ ನೋಡಿರುತ್ತೇನೆ.

7. ಅವರಲ್ಲಿ ನಮ್ಮ ಅಂಗಡಿಯಿಂದ ಚಾಕಲೇಟ್ ಖರೀದಿಸಿಕೊಂಡ ಹೋದ ವ್ಯಕ್ತಿಯು ಸಹ ಇದ್ದನು.

8. ಅದೇ ದಿನ ಸಾಯಂಕಾಲ ಪೊಲೀಸರು ನನ್ನ ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ.

ಪಾಟೀ ಸವಾಲುಃ ಶ್ರೀ.ಎಂ.ಎಂ.., ವಕೀಲರಿಂದ ಆರೋಪಿಗಳ ಪರವಾಗಿಃ

9. ನನ್ನ ಸ್ವಂತ ಊರು ಮಾಗಡಿ ಟೌನ್.

10. ಸದರಿ ಎಸ್.ಆರ್.ಎಸ್. ಬೇಕರಿಯಲ್ಲಿ ಸುಮಾರು 5 ವರ್ಷಗಳ ಕಾಲ ಕೆಲಸ ಮಾಡಿರುತ್ತೇನೆ.

11. ಯಾವ ಇಸವಿಯಿಂದ ಯಾವ ಇಸವಿಯವರೆಗೆ ಕೆಲಸ ಮಾಡಿರುತ್ತೇನೆ ಎಂಬುವುದು ನನಗೆ ಗೊತ್ತಿಲ್ಲ.

12. ಸದರಿ ಬೇಕರಿ ಕೆಲಸವನ್ನು ಬಿಟ್ಟು ಈಗ ಸುಮಾರು 5 ½ ವರ್ಷಗಳಾಗಿರುತ್ತದೆ.

13. ನಾನು ಬಿಎ ಅಂತಿಮ ವರ್ಷ ಪೂರ್ತಿ ಮಾಡಿರುವುದಿಲ್ಲ.

14. ಸದರಿ ನಮ್ಮ ಬೇಕರಿ ಎಷ್ಟು ಜನ ಬಂದು ಹೋಗುತ್ತಿದ್ದರು ಎಂಬುವುದರ ಕುರಿತು ನಾನು ಅವರನ್ನು ನೋಡಿ ಗುರುತಿಸಲು ಆಗುವುದಿಲ್ಲ.

15. ಸದರಿ ಮುಸ್ಲಿಂ ಯುವಕನ ಮನೆಯನ್ನು ಮಾಗಡಿ ಟೌನ್ ನಲ್ಲಿ ಇರುವ ಗಾಣಿಗರ ಬೀದಿಯಲ್ಲಿ ಇರುವುದನ್ನು ನೋಡಿರುತ್ತೇನೆ.

16. ಸದರಿ ನಮ್ಮ ಬೇಕರಿಯಿಂದ ಸದರಿ ಮುಸ್ಲಿಂ ಯುವಕನ ಮನೆಯು ಸುಮಾರು 1 ಕಿ.ಮೀ.ಅಂತರದಲ್ಲಿರುತ್ತದೆ.

17. ಆತನು ನಮ್ಮ ಬೇಕರಿಯಿಂದ ಒಂದೇ ಬಾರಿ ಬಂದು ಖರೀದಿ ಮಾಡಿ ಕೊಂಡು ಹೋಗಿದ್ದನು.

18. ಬೇರೆ ಸಮಯದಲ್ಲಿ ಜ್ಯೂಸ್ ಕುಡಿಯಲು ಬರುತ್ತಿದ್ದನು.

19. ನಮ್ಮ ಬೇಕರಿಯಿದ ಅರ್ಧ ಕಿ.ಮೀ. ಅಂತರದಲ್ಲಿ ಸದರಿ ಶವ ಇದ್ದ ಚರಂಡಿ ಇತ್ತು.

20. ಊರಲ್ಲಿ ಎಲ್ಲರಿಗೂ ಮುಸ್ಲಿಂ ಯುವತಿಯ ಕೊಲೆಯಾಗಿರುವ ವಿಚಾರ ಗೊತ್ತಾದಂತೆ ನನಗೂ ಸಹ ತಿಳಿದು ಬಂದಿರುತ್ತದೆ.

21. ಮಾಗಡಿ ಬಸ್ ಸ್ಟ್ಯಾಂಡ್ ನಿಂದ ಸದರಿ ನಮ್ಮ ಬೇಕರಿ ಸುಮಾರು 1 ಕಿ. ಮೀ ಅಂತರದಲ್ಲಿರುತ್ತದೆ.

22. ಮಾಗಡಿ ಬಸ್ ಸ್ಟ್ಯಾಂಡ್ ನಿಂದ ಕೂದೂರು ಕಡೆ ಹೋಗುವ ರಸ್ತೆಯಲ್ಲಿ ಸದರಿ ಬಸ್ ಸ್ಟ್ಯಾಂಡ್ ನಿಂದ ಅರ್ಧ ಕಿ.ಮೀ ಅಂತರದಲ್ಲಿ ಬಲಕ್ಕೆ ತಿರುಗಿ ಹೊಸಹಳ್ಳಿ ರಸ್ತೆಗೆ ಹೋಗಿ ಸದರಿ ಸ್ಥಳಕ್ಕೆ ಹೋಗಬೇಕಾಗುತ್ತದೆ.

23. ಗೋಣಿ ಚೀಲದಲ್ಲಿ ಶವಹಾಕಿದ ಅಕ್ಕಪಕ್ಕದ ಜಾಗದಲ್ಲಿ ಮನೆಗಳು ಮತ್ತು ಮುಸ್ಲಿ ಗೋರಿಗಳೂ ಸಹ ಇತ್ತು.

24. ನಾನು ಸದರಿ ಸ್ಥಳಕ್ಕೆ ಹೋಗಿ ನೋಡಿದಾಗ ಶವ ಗೋಣಿ ಚೀಲದಲ್ಲಿ ಹಾಕಿ ಕಟ್ಟಿದ್ದು ಇತ್ತು.

25. ಸದರಿ ಗೋಣಿ ಚೀಲದ ಬಾಯಿ ಕಟ್ಟಿದ್ದರಿಂದ ಒಳಗೆ ಏನು ಇತ್ತು ಎಂಬುವುದನ್ನು ನಾನು ನೋಡಿರುವುದಿಲ್ಲ ಎಂಬುವುದು ಸರಿ.

26.ಸದರಿ ಗೋಣಿ ಚೀಲ ಅರಣ್ಯ ಇಲಾಖೆಯ ಪ್ರದೇಶದಲ್ಲಿರುವ ಹಳ್ಳದಲ್ಲಿ ಇತ್ತು ಎಂಬುವುದು ಸರಿ.

27. ನನಗೆ ಸದರಿ ಮುಸ್ಲಿಂ ಯುವಕನ ಹೆಸರು ಗೊತ್ತಿರುವುದಿಲ್ಲ ಮತ್ತು ನಾನು ಆತನ ಹೆಸರು ಮಹಮ್ಮದ್ ಶಹಬಾಜ್ ಕಲಂದರ್ ಎಂದು ಪೊಲೀಸರ ಮುಂದೆ ಹೇಳಿರುವುದಿಲ್ಲ.

28. ಪೊಲೀಸರು ನಾನು ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದಾದರ ಕುರಿತು ಮತ್ತು ಸಂಬಳ ಪಡೆಯುತ್ತಿದ್ದಾದರ ಕುರಿತುಯಾವುದೇ ದಾಖಲಾತಿಯನಲ್ಲು ಪಡೆದುಕೊಂಡಿರುವುದಿಲ್ಲ.

29. ಸದರಿ ಬೇಕರಿಯನ್ನು ಲಕ್ಷ್ಮೀನಾರಾಯಣ ಎಂಬ ಮಾಲೀಕರು ಸುಮಾರು 10-15 ವರ್ಷಗಳಿಂದ ನಡೆಸುತ್ತಿದ್ದಾರೆ.

30. ಈ ಪ್ರಕರಣದಲ್ಲಿ ನನಗೇನು ಮಾಹಿತಿ ಇರದೇ ಇದ್ದರೂ ಸಹ ಪೊಲೀಸರು ನನ್ನನ್ನು ಈ ಪ್ರಕರಣದಲ್ಲಿ ಅನೂಕೂಲಕ್ಕೆ ತಕ್ಕಂತೆ ಸೇರಿಸಿಕೊಂಡು ಹೇಳಿಕೊಂಡಂತೆ ದಿನಾಂಕ ಸಹಿತವಾಗಿ ಕಂಠಪಾಠ ಮಾಡಿಕೊಂಡು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂಬುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.